ಬೇಂದ್ರೆಯವರದು ವಿರಾಟ್ ವ್ಯಕ್ತಿತ್ವ, ವಿಶೇಷ ವ್ಯಕ್ತಿತ್ವ. ಅವರು ಕಡೆಕಡೆಗೆ ಒಂದು ಮಾತು ಹೇಳಿದ್ದರು. 'ನಿಮ್ಮ ಆಸೆ ಏನು' ಎಂದು ನಾವು ಕೇಳಿದಾಗ,

'ಇದ್ದವರ ಎದೆಯಲ್ಲಿ
ತನ್ನ ಬಗೆ ಇರಲಿಲ್ಲ
ಸಪ್ತಸ್ವರ್ಗಕ್ಕೂ ಅದುವೆ ಹೆಚ್ಚು'

ಎಂದಿದ್ದರು. ಇದ್ದವರು ಎಂದರೆ ಬರಿಯ ಉಸಿರಾಡುವವರು ಮಾತ್ರ ಅಲ್ಲ, ಖರೇ ಬದುಕಿದ್ದವರು ಅಂತ. ಬೇಂದ್ರೆಯವರು ಇಷ್ಟು ಜನ ಖರೇ ಬದುಕಿದ್ದವರ ಎದೆಯಲ್ಲಿ ಇದ್ದಾರೆ, ಬದುಕಿದ್ದಾರೆ ಎಂದರೆ ಅದು ನಿಜಕ್ಕೂ ಅತ್ಯಂತ ಸಂತೋಷದ ವಿಚಾರ.

ನಾನು ಬೇಂದ್ರೆಯವರ ವಿದ್ಯಾರ್ಥಿ, ಅನೇಕ ವಿಚಾರಗಳನ್ನು ಗುರುವಾಗಿ ಬೇಂದ್ರೆ ನನಗೆ ಕಲಿಸಿದ್ದಾರೆ. ಅವರು ಕಲಿಸುತ್ತಿದ್ದ ಬಗೆ ಒಂದು ರೀತಿಯಲ್ಲಿ ಬೇರೆಯದೇ ಆಗಿರುತ್ತಿತ್ತು.

ಒಂದು ಮುಂಜಾನೆ, ಬೇಂದ್ರೆಯವರೊಡನೆ ಅಡ್ಡಾಡಲು ಹೋದೆ. ಒಂದು ಮನೆಯ ಮುಂದೆ ಹುಡುಗನೊಬ್ಬ ಅಶ್ಲೀಲವೆನ್ನಬಹುದಾದ ಬೈಗುಳಗಳನ್ನು ಉಪಯೋಗಿಸುತ್ತಿದ್ದ. ಆ ಶಬ್ದಗಳನ್ನು ಕೇಳಿದ ಬೇಂದ್ರೆಯವರು ಅಲ್ಲಿಯೇ ಸ್ವಲ್ಪಕಾಲ ನಿಂತರು, 'ಮನೆಯ ಒಳಗೆ ಹೋಗಿ ಆ ಹುಡುಗನ ತಾಯಿಯನ್ನು ಕರೆದುಕೊಂಡು ಬಾ' ಎಂದು ನನಗೆ ಹೇಳಿದರು. ನಾನು 'ಬೇಂದ್ರೆ ಮಾಸ್ತರರು ಕರೆಯುತ್ತಿದ್ದಾರೆ' ಎಂದು ಆಕೆಯನ್ನು ಕರೆದುಕೊಂಡು ಬಂದೆ. ಆಗ ಬೇಂದ್ರೆಯವರು ಆ ಹುಡುಗನನ್ನು ಉದ್ದೇಶಿಸಿ, 'ತಮ್ಮಾ ನಿಮ್ಮ ತಾಯಿ ಬಂದಿದ್ದಾರೆ. ನೀ ಏನ್ ಮಾಡಬೇಕು ಅಂತ ಇದ್ದಿಯೋ ಅದನ್ನು ಮಾಡು' ಎಂದರು. ಅಷ್ಟು ಹೊತ್ತಿಗಾಗಲೇ ಅಲ್ಲಿ ಜನ ಸೇರಿದ್ದರು. ಆ ತಾಯಿಗೆ ತುಸು ಮುಜುಗರ, ನಾಚಿಕೆಯಾದಂತೆ ಆಯಿತು. ಬೇಂದ್ರೆಯವರು ಅಲ್ಲಿನ ಸಭ್ಯ ಜನರನ್ನು ಕುರಿತು ಈ ಹುಡುಗನಿಗೆ ಇಷ್ಟು ಬೈಗುಳ ಬಂದದ್ದಾರೂ ಹೇಗೆ? ಎಂದು ಪ್ರಶ್ನಿಸುತ್ತಾ, 'ಮನಸ್ಸಿನಲ್ಲಿರುವ ಹಿಂಸೆಯೇ ಬೈಗುಳದ ರೂಪ ತಾಳುತ್ತದೆ. ನಮ್ಮ ಜೀವನವನ್ನು ಸುಧಾರಿಸಿಕೊಳ್ಳದ ಹೊರತು ಜೀವನಕ್ಕೆ ಸಂಸ್ಕಾರ ಸಿಗುವುದು ಸಾಧ್ಯವಿಲ್ಲ' ಎಂದು ಬೈಗುಳದ ಬಗ್ಗೆ ವಿಸ್ತೃತವಾದ ವ್ಯಾಖ್ಯಾನವನ್ನೇ ಮಾಡಿದರು. ಅಷ್ಟೇ ಅಲ್ಲ ನನಗೆ ಒಂದು **assignment** ಸಹಾ ನೀಡಿದರು. ನಿನಗೆ ಎಷ್ಟು ವಿಧದ ಬೈಗುಳ ಗೊತ್ತು? ಉತ್ತರ ಕರ್ನಾಟಕದ ಕೆಲವು ವಿಶಿಷ್ಟ ವರ್ಗಗಳು ಉಪಯೋಗಿಸುವ ಬೈಗುಳದ ಸ್ವರೂಪವೇನು ಎಂದು ಕೇಳಿದರು. ಅಷ್ಟೇ ಅಲ್ಲದೆ ಅಂತಹ ಬೈಗುಳಗಳ ಒಂದು ಯಾದಿಯನ್ನು ತಯಾರಿಸಿ ತರಲು ಹೇಳಿದರು. ನಾನು ಕೆಲವು ಗಲ್ಲಿಗಳಲ್ಲಿ ಅಡ್ಡಾಡಿ, ಒಬ್ಬ ವ್ಯಕ್ತಿಯನ್ನು ಬೈಗುಳಗಳ ಯಾದಿ ಮಾಡಿಕೊಡುವಂತೆ ಕೇಳಿದೆ. ಅದಕ್ಕೆ ಅವರು 'ಅದು ಹಂಗ ಬರೋದಿಲ್ಲರಿ, ಜಗಳವಾಡೋವಾಗ ಸಹಜವಾಗಿ ಬರುತ್ತದೆ' ಅಂದ. ಅನಂತರ ಬೇಂದ್ರೆಯವರು ಉತ್ತರ ಕರ್ನಾಟಕದ ವಿಶೇಷ ವರ್ಗಗಳಲ್ಲಿ ಬಳಸುವ 'ಸುಡಲಿ', 'ಬೆಂಕಿ ಹಚ್ಚಲಿ' ಮುಂತಾದ ಬೈಗುಳಗಳ ಬಗ್ಗೆ ಹೇಳಿದರು. ಅಷ್ಟೇ ಅಲ್ಲದೇ, ಪಂಪನಿಂದ ಕುಮಾರವ್ಯಾಸನವರೆಗೆ ಕನ್ನಡ ಕವಿಗಳು ಬಳಸಿರುವ ಬೈಗುಳಗಳು, ಕಿಟೆಲ್ ಶಬ್ದಕೋಶದಲ್ಲಿರುವ ಬೈಗುಳಗಳ ಪಟ್ಟಿ ತಯಾರಿಸುವಂತೆ ಹೇಳಿದರು. ಅಷ್ಟೇ ಅಲ್ಲ, ದೇಶವಿದೇಶಗಳ ಬೈಗುಳಗಳನ್ನು, ಹಿಂಸೆಗೂ ಬೈಗುಳಕ್ಕೂ ಇರುವ ಸಂಬಂಧವನ್ನು ವಿವರಿಸಿದರು.

ಬೇಂದ್ರೆಯವರದು ತುಂಬಾ ಚಂಚಲ ಪ್ರವೃತ್ತಿ. ಒಮ್ಮೆ ಗಂಗಾಲಹರಿಯನ್ನು ಓದುತ್ತಿದ್ದರು. ಮೊದಲನೆಯ ಪದ್ಯವನ್ನು ಓದುವಷ್ಟರಲ್ಲಿಯೇ, ಮೊದಲನೆಯ ಪದ್ಯದ ಶಬ್ದಗಳ ಬಗ್ಗೆ ಅನೇಕ ಕವಿತೆಗಳನ್ನು ಬರೆದರು. ಅವರ ದೃಷ್ಟಿಯಲ್ಲಿ ಕಾವ್ಯವೆನ್ನುವುದು ಅಧ್ಯಯನದ, ಅಭ್ಯಾಸದ